೨

ಮಕ್ಕಳ ಬರಹ ಕೌಶಲಗಳನ್ನು ಹೆಚ್ಚಿಸುವುದು ಅಥವಾ ಲೇಖಕರಾಗುವ ಪರಿಣತಿ ನಿರ್ಮಿಸುವುದು

– ಸ್ನೇಹಲತಾ ಗುಪ್ತಾ
ಜೋಸೆಫ್ ಮಥಾಯ್
ಮತ್ತು ಪ್ರಭಾತ್ ಕುಮಾರ್ ಝಾ

ಸಾರಾಂಶ: ಭಾಷೆಯ ನಾಲ್ಕು ಸಾಮರ್ಥ್ಯಗಳಲ್ಲಿ ಬರವಣಿಗೆಯು ಉನ್ನತವಾದದ್ದು ಮತ್ತು ಪ್ರಮುಖ ಅಭಿವ್ಯಕ್ತಿ ಮಾಧ್ಯಮ. ಕಲಿಕೆ ಅಥವಾ ಜ್ಞಾನವು ಬರವಣಿಗೆಯ ರೂಪದಲ್ಲಿ ಹೊರಹೊಮ್ಮಲು ಅಭ್ಯಾಸ ಬಹಳ ಮುಖ್ಯವಾದದ್ದು. ಬರವಣಿಗೆಯಲ್ಲಿ ತೊಡಗಿಸಿಕೊಂಡಂತೆ ಅಂತರಾಳದ ಅನೇಕ ಚಿಂತನೆಗಳು ಅಕ್ಷರದ ರೂಪದಲ್ಲಿ ಹೊರಹೊಮ್ಮುತ್ತವೆ. ಏನನ್ನು ಓದುವುದು ಎಂಬ ಪ್ರಶ್ನೆಯಂತೆ ಏನನ್ನು ಬರೆಯುವುದು ಎಂಬ ಪ್ರಶ್ನೆ ಸಹ ಅತಿ ಮುಖ್ಯವಾದದ್ದು. ಇದಕ್ಕೆ ಸಂಬಂಧಿಸಿದಂತೆ ದೆಹಲಿಯ ಅಂಕುರ್ ಸಂಸ್ಥೆಯು ಮಾಡಿದ ಪ್ರಯೋಗದ ಪ್ರಕ್ರಿಯೆಯನ್ನು ಇಲ್ಲಿ ವಿವರಿಸಲಾಗಿದೆ. ಬರವಣಿಗೆಗೆ ವಿಷಯವನ್ನು ಆಯ್ಕೆ ಮಾಡಿಕೊಳ್ಳುವ ಬಗೆಯನ್ನು ಸಹ ಇಲ್ಲಿ ಚರ್ಚಿಸಲಾಗಿದೆ.

ಪ್ರಮುಖ ಪದಗಳು: ಸಂಲಗ್ನ– **Cohesion**, ರಾಷ್ಟ್ರೀಯ ಕೇಂದ್ರಿಕೃತ ಅಧ್ಯಯನ ತಂಡ– **National Focus Group**, ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು– **National Curriculum Framework**, ಉತ್ಪಾದಕ ಸಂವಹನ ಸುರುಳಿ– **Generative Communication Spiral**, ಕಲಿಕಾ ಸಮೂಹಗಳು– **learning collectives**, ವೈಯಕ್ತಿಕ ಬರಹ– **individual writing**, ಸಾಮೂಹಿಕ ಅಭ್ಯಾಸ– **group practices**, ಬರವಣಿಗೆಯ ಚಕ್ರ– **cycle of writing**, ಉತ್ಪಾದಕ ಸಂವಹನ ಸುರುಳಿ– **generative communication spiral**, ಬರವಣಿಗೆಯಲ್ಲಿ ಆಸಕ್ತಿಯುಳ್ಳವರ ಗುಂಪು– **writers circle.**

ನಮ್ಮ ದೇಶದಲ್ಲಿ, ಇಂಗ್ಲಿಷ್ ಮತ್ತು ಭಾರತೀಯ ಭಾಷೆಗಳ ಬೋಧನೆ ಕುರಿತು, ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್‌ಸಿಎಫ್) ೨೦೦೫ ಮತ್ತು ರಾಷ್ಟ್ರೀಯ ಕೇಂದ್ರೀಕೃತ ಅಧ್ಯಯನ ತಂಡ (ಎನ್‌ಎಫ್‌ಜಿ – ನ್ಯಾಷನಲ್ ಫೋಕಸ್ ಗ್ರೂಪ್) ಭಾಷಾ ಬೋಧನೆಯ ವಿಧಾನದಲ್ಲಿ ನಿರ್ಣಾಯಕ ಬದಲಾವಣೆ ಮಾಡಿವೆ. ಈ ಮಹತ್ತ್ವದ ಹಂತದ ಅನಂತರವೂ ಇನ್ನೂ ಹೆಚ್ಚಿನದನ್ನು ಮಾಡಬೇಕಾಗಿರುವುದು ಉಳಿದಿದೆ. ೨೦೦೬ ರಲ್ಲಿ ಹೊರತಂದ ಹೊಸ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳು, ಎನ್‌ಸಿಎಫ್ ಮತ್ತು ಎನ್‌ಎಫ್‌ಜಿ ಮಾರ್ಗದರ್ಶಿ ತತ್ತ್ವಗಳಲ್ಲಿ ವ್ಯಕ್ತಪಡಿಸಿದ ಚಿಂತನೆಯನ್ನು ಸಂಪೂರ್ಣವಾಗಿ ಪ್ರತಿಬಿಂಬಿಸಲಿಲ್ಲ. ಭಾಷಾ ಪಠ್ಯಪುಸ್ತಕಗಳನ್ನೂ ಸಹ ಪ್ರಕಟಿಸುವ, ಅದಕ್ಕಿಂತ ಹೆಚ್ಚಾಗಿ ಹನ್ನೆರಡನೇ ತರಗತಿಯ ಪರೀಕ್ಷೆಯನ್ನು ನಡೆಸುವ ಮತ್ತು ತನ್ನ ಅಧೀನದಲ್ಲಿ ನೋಂದಣಿಯಾಗಿರುವ ಶಾಲೆಗಳ ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಮಾಡುವ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯ (ಸಿಬಿಎಸ್‌ಇ) ವಿಧಾನದಲ್ಲಿಯೂ ಸಹ ಈ ಬದಲಾವಣೆಗಳನ್ನು ಸಮರ್ಪಕವಾಗಿ ನಿರೂಪಿಸಲಾಗಿಲ್ಲ.

ಇದರೊಂದಿಗೆ ಸಂಯೋಜಿತವಾಗಿರುವ ಹನ್ನೆರಡು ಸಾವಿರಕ್ಕೂ ಹೆಚ್ಚು ಶಾಲೆಗಳಿಗೆ ನೀಡಲಾಗುವ ಮಾರ್ಗದರ್ಶನವನ್ನು ಅರ್ಥಮಾಡಿಕೊಳ್ಳಲು ಸಿಬಿಎಸ್‌ಇ ಪ್ರೌಢ ಶಾಲಾ ಪಠ್ಯಕ್ರಮವನ್ನು ಅಧ್ಯಯನ ಮಾಡುವುದು ಅಗತ್ಯವಾಗಿದೆ. ೨೦೧೧ ರ ಆವೃತ್ತಿಯು, 'ಮಾತೃಭಾಷಾ ಹಿಂದಿ'ಯೊಂದಿಗೆ ವ್ಯವಹರಿಸುವಾಗ ಶಿಕ್ಷಕರಿಗೆ, ವಿದ್ಯಾರ್ಥಿಗಳ 'ಸ್ವತಂತ್ರ ಮತ್ತು ಮೂಲ ಚಿಂತನೆಯನ್ನು' ಗೌರವಿಸುವಂತೆ ಒತ್ತಾಯಿಸುತ್ತದೆ. ಆದಾಗ್ಯೂ, ಅದರ ಹದಿನಾರು ಉದ್ದೇಶಗಳಲ್ಲಿ ಒಂದು ಮಾತ್ರ ವಿದ್ಯಾರ್ಥಿಗಳು ಸ್ವಂತ ಅನುಭವಗಳಿಂದ ಬರೆಯುವ ಮತ್ತು ಸ್ವತಂತ್ರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮಹತ್ತ್ವವನ್ನು ಸೂಚಿಸುತ್ತದೆ. ಉದ್ದೇಶಗಳನ್ನು ಪ್ರಾಮುಖ್ಯ ಕ್ರಮದಲ್ಲಿ ಪಟ್ಟಿ ಮಾಡಲ್ಪಟ್ಟಿಲ್ಲವೆಂದು ತೋರುತ್ತದೆಯಾದರೂ, ಎರಡನೆಯ ಉದ್ದೇಶವು 'ವಿರಾಮ್–ಚಿಹ್ನ್ –ಲೇಖನ ಚಿಹ್ನ್' (ಅಲ್ಪವಿರಾಮ ಮತ್ತು ಪೂರ್ಣ ವಿರಾಮ) ಗಳನ್ನು ಸರಿಯಾಗಿ ಬಳಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದನ್ನು ಸೂಚಿಸುತ್ತದೆ.

ಸಂವಹನ ಇಂಗ್ಲಿಷ್ ವಿಭಾಗದಡಿಯಲ್ಲಿ, ಸೃಜನಶೀಲತೆ ಮತ್ತು ಸ್ವಯಂ ಮೇಲ್ವಿಚಾರಣೆಯ 'ಸಾಮರ್ಥ್ಯಗಳನ್ನು' ವಿದ್ಯಾರ್ಥಿಗಳಲ್ಲಿ ಅಭಿವೃದ್ಧಿಪಡಿಸಲು ಶಿಕ್ಷಕರನ್ನು ಕೋರಲಾಗಿತ್ತು. ವಿದ್ಯಾರ್ಥಿಗಳು, ಪಠ್ಯ ಅಥವಾ ಶಿಕ್ಷಕರ ಮೇಲೆ ಅವಲಂಬಿತರಾಗಿರುವುದಕ್ಕಿಂತಲೂ 'ಸ್ವಂತವಾಗಿ ಆಲೋಚಿಸಲು ಮತ್ತು ಅವರ ಯೋಚನೆಗಳನ್ನು

ವ್ಯಕ್ತಪಡಿಸಲು ಅವರ ಅನುಭವ, ಜ್ಞಾನ ಮತ್ತು ಕಲ್ಪನೆಯನ್ನು ಬಳಸಿಕೊಳ್ಳುವಂತೆ ಪ್ರೋತ್ಸಾಹಿಸಬೇಕು' ಎಂದು. ಇದನ್ನನುಸರಿಸಿ ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕಾದ ಹನ್ನೆರಡು ಸಾಮರ್ಥ್ಯಗಳ ಪಟ್ಟಿಯನ್ನು ಮಾಡಲಾಗಿತ್ತು. ಸೂಕ್ತ 'ಲೇಖನ ಚಿಹ್ನೆ ಮತ್ತು ಸಂಲಗ್ನ ತಂತ್ರಗಳನ್ನು (ವಾಕ್ಯ/ಪದಗಳನ್ನು ಸೇರಿಸುವ) ಬಳಸಿಕೊಂಡು ಸ್ಪಷ್ಟ ಮತ್ತು ವ್ಯಾಕರಣ ಶುದ್ಧವಾದ ಇಂಗ್ಲಿಷ್‌ನಲ್ಲಿ ವಿಚಾರಗಳನ್ನು ವ್ಯಕ್ತಪಡಿಸುವ ಸಾಮರ್ಥ್ಯಗಳನ್ನು ಪಟ್ಟಿ ಮಾಡಲಾಗಿತ್ತು'. ಮತ್ತು ಆದ್ಯತೆಯು ಬರವಣಿಗೆಯ ಕೌಶಲ ಮತ್ತು ಸಾಮರ್ಥ್ಯಗಳ ಮೇಲೆ ಇತ್ತು ಎಂದು ಹೇಳಬೇಕಾದ ಅಗತ್ಯವಿಲ್ಲ.

ಸೃಜನಾತ್ಮಕ ಬರವಣಿಗೆ ಮತ್ತು ಭಾಷಾಂತರ ಅಧ್ಯಯನಗಳ(ಕ್ರಿಯೇಟಿವ್ ರೈಟಿಂಗ್ ಅಂಡ್ ಟ್ರಾನ್ಸ್‌ಲೇಷನ್ ಸ್ಟಡೀಸ್) ಕುರಿತಾದ ಸಿಬಿಎಸ್‌ಇ ಪಠ್ಯಪುಸ್ತಕವು ಸೃಜನಶೀಲ ಬರವಣಿಗೆಯು ಅನುಭವವನ್ನು ಪದಗಳಿಗೆ ವರ್ಗಾಯಿಸುವ ಜ್ಞಾನಾತ್ಮಕ ಪ್ರಕ್ರಿಯೆಯೆಂದು ಅಂಗೀಕರಿಸುತ್ತದೆ. ಇದರ ಆದ್ಯಂತ ಗುರಿಯು ಇನ್ನೂ ಕಲಿಕಾರ್ಥಿಗಳಾಗಿರುವವರ ಪ್ರಾಯೋಗಿಕ ಸಾಮರ್ಥ್ಯವನ್ನು ತೀಕ್ಷ್ಣಗೊಳಿಸುವುದೇ ಆಗಿದೆ. ಈ ಪಠ್ಯವು ವಿವಿಧ ರೀತಿಯ ಬರವಣಿಗೆಗೆ ವಿದ್ಯಾರ್ಥಿಗಳನ್ನು ಪರಿಚಯಿಸುತ್ತದೆ ಮತ್ತು ವಿದ್ಯಾರ್ಥಿಗಳಿಗೆ ತಮ್ಮ ತಿಳಿವಳಿಕೆಯನ್ನು ಸ್ವಯಂ ಪರೀಕ್ಷಿಸಿಕೊಳ್ಳಲು ಸಹಾಯ ಮಾಡುವ ಮತ್ತು ಆ ತಿಳಿವಳಿಕೆ ಎಷ್ಟರ ಮಟ್ಟಿಗೆ ಸಮರ್ಥವಾಗಿ ವರ್ಗಾವಣೆಯಾಗಿದೆ ಎಂಬ ಪ್ರಾಯೋಗಿಕ ಅಭ್ಯಾಸಗಳನ್ನು ಒಳಗೊಂಡಿದೆ.

ಈ ಸಮೀಕ್ಷೆಯು ಭಾಷಾ ಸನ್ನಿವೇಶದಲ್ಲಿ, ಎನ್‌ಸಿಎಫ್ ೨೦೦೫ ಮತ್ತು 'ಎನ್‌ಎಫ್‌ಜಿ'ಯಲ್ಲಿ ಉಲ್ಲೇಖಿಸಲಾದ ಬದಲಾವಣೆಗಳು, ವಿಶೇಷವಾಗಿ ಬರವಣಿಗೆಯಲ್ಲಿ ನಿರೀಕ್ಷಿತ ಮಟ್ಟವನ್ನು ತಲಪಿಲ್ಲ ಎಂದು ತೋರಿಸಲು ಪ್ರಯತ್ನಿಸುತ್ತದೆ. ಹಾಗಾಗಿ ಬರವಣಿಗೆಯು ತರಗತಿಯೊಳಗೆ ಒಂದು ಸಮಸ್ಯೆಯ ಕ್ಷೇತ್ರವಾಗಿ ಮುಂದುವರಿಯುತ್ತಿರುವುದು ಆಶ್ಚರ್ಯವೇನಲ್ಲ.

ಶಿಕ್ಷಕರು ತರಗತಿಯೊಳಗೆ ಬರೆಯಬೇಕೆಂದು ಘೋಷಿಸಿದ ಕ್ಷಣದಲ್ಲಿ ವಿದ್ಯಾರ್ಥಿಗಳಿಂದ ಸಾಮೂಹಿಕ ನಿಟ್ಟುಸಿರು ಹೊರಬರುತ್ತದೆ ಎಂದು ಸಮೀಕ್ಷೆಯ ಸಮಯದಲ್ಲಿ ಗಮನಿಸಲಾಗಿದೆ. ಇದು ವಿದ್ಯಾರ್ಥಿಗಳ ಮನೋಭಾವವನ್ನು ಬಹಿರಂಗಪಡಿಸುತ್ತದೆ. ಅವರಿಗೆ ಬರೆಯುವುದೆಂದರೆ ಬೇಸರದ ಕೆಲಸ, ಭಯಭೀತರಾಗುವ ವಿಷಯ ಮತ್ತು ಅದನ್ನು ಆದಷ್ಟು ಮುಂದೂಡುವುದು ಅಥವಾ ಅದನ್ನು ಮಾಡದಿರುವಂತೆ ಸಬೂಬು ನೀಡುತ್ತಾರೆ.

ಕಿರಿಯ ತರಗತಿಗಳಲ್ಲಿ, ಅನೇಕ ವಿದ್ಯಾರ್ಥಿಗಳ ಮೊದಲ ಪ್ರತಿಕ್ರಿಯೆ ಎಂದರೆ ತತ್‌ಕ್ಷಣವೇ ಅವರ ಪೆನ್ಸಿಲ್‌ಗಳನ್ನು ಮೊನಚು ಮಾಡಲು ಒಂದು ಮೂಲೆಗೆ

ಹೋಗುವುದು. ಹಿರಿಯ ತರಗತಿಗಳಲ್ಲಿ, ಬರೆಯಲು ತಮ್ಮ ಪೆನ್ನಿಗಾಗಿ ಶಿಕಾರಿ ಪ್ರಾರಂಭವಾಗುತ್ತದೆ. ವಿದ್ಯಾರ್ಥಿಗಳು ಬರವಣಿಗೆಗೆ ಸಿದ್ಧವಾಗಲು ಸಮಯ ವ್ಯರ್ಥ ಮಾಡುತ್ತಾರೆ, ಕೆಲವೊಮ್ಮೆ ಹತ್ತು ನಿಮಿಷಗಳನ್ನು ತೆಗೆದುಕೊಳ್ಳುತ್ತಾರೆ. ಮೂವತ್ತೈದರಿಂದ ನಲವತ್ತು ನಿಮಿಷಗಳ ಒಂದು ಪಿರಿಯಡ್‌ನಲ್ಲಿ, ಕಾಲುಭಾಗ, ಈಗಾಗಲೇ ಹೋಯ್ತು.

ಒಂದೆಡೆ, ವಿದ್ಯಾರ್ಥಿಗಳು ಆಗಾಗ್ಗೆ ಏನು ಬರೆಯಬೇಕೆಂದು ತಿಳಿದಿಲ್ಲವೆಂದು ದೂರುತ್ತಾರೆ, ಹೇಗೆ ಪ್ರಾರಂಭಿಸಬೇಕು, ಅಥವಾ ಎಷ್ಟು ಪದಗಳನ್ನು ಬರೆಯಬೇಕು ಎಂದು ಚಕಿತರಾಗುತ್ತಾರೆ. ಮತ್ತೊಂದೆಡೆ ಶಿಕ್ಷಕರು, ವಿದ್ಯಾರ್ಥಿಗಳಲ್ಲಿನ, ಬರೆಯುವ ಅಸಮರ್ಥತೆ, ಕಳಪೆ ಕೈಬರಹ, ವ್ಯಾಕರಣ ಅಶುದ್ಧತೆ, ಲೇಖನ ಚಿಹ್ನೆಯ ಜ್ಞಾನದ ಕೊರತೆ, ಕಳಪೆ ಕಾಗುಣಿತ, ನಿರರ್ಗಳತೆ, ಮತ್ತು ಸುಸಂಬದ್ಧತೆ ಮತ್ತು ಸಂಘಟನೆಯ ಕೊರತೆಯನ್ನು ಉಲ್ಲೇಖಿಸಿ ವಿಷಾದಿಸುತ್ತಾರೆ, ಇವುಗಳಷ್ಟೇ ಬರೆಯುವ ಸಾಮರ್ಥ್ಯಕ್ಕೆ ಅಗತ್ಯವೆಂಬಂತೆ.

ಹಾಗಾದರೆ, ಬರಹವು ವಿದ್ಯಾರ್ಥಿಗಳಲ್ಲಿ ಸಾಮೂಹಿಕವಾಗಿ ನಿರಾಕಾರ ಭಾವನೆಯನ್ನು ಏಕೆ ಉಂಟುಮಾಡುತ್ತದೆ? ಮತ್ತು ಶಿಕ್ಷಕರು ವಿದ್ಯಾರ್ಥಿಗಳ ಕಳಪೆ ಬರವಣಿಗೆಯನ್ನು ಕುರಿತು ಏಕೆ ವಿಷಾದಿಸುತ್ತಾರೆ?

ವಿದ್ಯಾರ್ಥಿಗಳ ಬರವಣಿಗೆಯಿಂದ ಏನನ್ನು ನಿರೀಕ್ಷಿಸಲಾಗುತ್ತಿದೆ ಎಂಬುದನ್ನು ನಾವೀಗ ನೋಡೋಣ.

ಸಾಮಾನ್ಯವಾಗಿ ಇವುಗಳನ್ನು ನಿರೀಕ್ಷಿಸಲಾಗಿದೆ:

- ಕಪ್ಪು ಹಲಗೆ, ಪಠ್ಯ ಪುಸ್ತಕ, ಸಹಾಯ ಪುಸ್ತಕ ಇತ್ಯಾದಿಗಳಿಂದ ಉತ್ತರಗಳು ಮತ್ತು ಇತರ ವಿಸ್ತೃತ ಪಠ್ಯಗಳನ್ನು ಕಾಪಿ ಮಾಡಬೇಕು ಮತ್ತು ಇವುಗಳನ್ನು ಕಂಠಪಾಠ ಮಾಡಿ ಕಲಿಯಬೇಕು ಅನಂತರ ಅವುಗಳನ್ನು ಬರೆದು ತೋರಿಸಬೇಕು
- ನೀರಸ ಮತ್ತು ಸವಕಲು ವಿಷಯಗಳಾದ ಮಳೆಗಾಲದ ಒಂದು ದಿನ, ಮರಗಳ ಮೌಲ್ಯ, ಮುಂಜಾನೆಯ ವಿಹಾರ, ನನ್ನ ನೆಚ್ಚಿನ ಟಿವಿ ಕಾರ್ಯಕ್ರಮ, ಮತ್ತು ಅನಾರೋಗ್ಯ ರಜೆಗಾಗಿ ಪ್ರಾಂಶುಪಾಲರಿಗೆ ಅರ್ಜಿ, ಮುಂತಾದ ವಿಷಯಗಳ ಬಗ್ಗೆ ಬರೆಯಬೇಕು
- ನಿರ್ದಿಷ್ಟ ಚೌಕಟ್ಟಿನಲ್ಲಿ ವರದಿ, ಲೇಖನ, ಪತ್ರ, ಸತ್ಯ ಘಟನೆಗಳನ್ನು ವಿವರಿಸಿ ೨೦೦ ಪದಗಳಿಗೆ ಮೀರದಂತೆ ಬರೆಯಬೇಕು

ಇವುಗಳೇ ಬರವಣಿಗೆಯ ಸಾಮಾನ್ಯ ವಿಷಯಗಳು.

ವಿದ್ಯಾರ್ಥಿಗಳು ಸ್ವಂತವಾಗಿ ಬರೆಯಬಲ್ಲರೆಂದು ಶಿಕ್ಷಕರು ನಂಬುವುದಿಲ್ಲ, ಅಥವಾ ಅವರು ಸ್ವಂತವಾಗಿ ಬರೆಯುವರೆಂಬ ವಿಶ್ವಾಸವನ್ನೂ ಇಡುವುದಿಲ್ಲ. ವಿದ್ಯಾರ್ಥಿಗಳನ್ನು ಸ್ವಂತವಾಗಿ ಬರೆಯಲು ಬಿಟ್ಟರೆ, ಹಲವಾರು ತಪ್ಪುಗಳನ್ನು ಮಾಡುತ್ತಾರೆ ಮತ್ತು ಶಿಕ್ಷಕರು ಆ ತಪ್ಪುಗಳನ್ನು ತಿದ್ದಲು ಹೆಚ್ಚು ಸಮಯವನ್ನು ಕಳೆಯಬೇಕಾಗುತ್ತದೆ ಎಂದು ಅಂದುಕೊಳ್ಳುತ್ತಾರೆ. ಆದ್ದರಿಂದ, ಇಂತಹ ಸನ್ನಿವೇಶಗಳಲ್ಲಿ ಉತ್ತಮ ಪರಿಹಾರವೆಂದರೆ ವಿದ್ಯಾರ್ಥಿಗಳಿಗೆ ಸ್ವಂತವಾಗಿ ಬರೆಯಲು ಅವಕಾಶವನ್ನೇ ನೀಡದಿರುವುದು ಹಾಗೂ ಚೌಕಟ್ಟು ಮತ್ತು ಪದ ಮಿತಿಗಳನ್ನು ಕಟ್ಟುನಿಟ್ಟಾಗಿ ಸೂಚಿಸುವ ಮೂಲಕ ಅವರ ಬರವಣಿಗೆಯನ್ನು ಮೊಟಕುಗೊಳಿಸುವುದು ಇನ್ನೊಂದು ತಂತ್ರವಾಗಿದೆ.

ಬರವಣಿಗೆಯ ಬಗ್ಗೆ ವಿದ್ಯಾರ್ಥಿಗಳಲ್ಲಿರುವ ಭಯ ಮತ್ತು ಆತಂಕಗಳು ಅವರ ಮನೋಭಾವವನ್ನು ಪ್ರಭಾವಿಸುವ ಇತರ ಕೆಲವು ಪ್ರಮುಖ ಅಂಶಗಳಾಗಿವೆ. ವಿದ್ಯಾರ್ಥಿಗಳು ಬರೆಯುವ ಎಲ್ಲವನ್ನೂ ಶ್ರೇಣೀಕರಿಸಬೇಕು ಅಥವಾ ಮೌಲ್ಯಮಾಪನ ಮಾಡಬೇಕು; ಅದಕ್ಕೆ ಸರಿ ತಪ್ಪು ಅಂತ ಬರೆಯಬೇಕು ಮತ್ತು ಗ್ರೇಡ್ ಅಥವಾ ಅಂಕಗಳನ್ನು ನಿಗದಿಪಡಿಸಬೇಕು ಇತ್ಯಾದಿ ನಂಬಲಾಗಿದೆ. ಇವುಗಳು ಸಾಮಾನ್ಯ ನಂಬಿಕೆಗಳಾಗಿದ್ದು ಬರವಣಿಗೆಯನ್ನು ಸಂಪೂರ್ಣ ಸಂತೋಷ ಅಥವಾ ಬರವಣಿಗೆಯ ಆನಂದಕ್ಕಾಗಿ ಮಾಡುವುದು ಬಹಳ ಅಪರೂಪ. ಹೀಗಿರುವಾಗ ಯಾವುದೇ ಬರವಣಿಗೆಯ ಕಾರ್ಯವನ್ನು ಮುಗಿಸಿದ ಕೂಡಲೇ ವಿದ್ಯಾರ್ಥಿಗಳು ತಮ್ಮದೇ ಆದ, ತಾವೇ ಬರೆದಿರುವುದನ್ನು ನಿರಾಕರಿಸುವುದರಲ್ಲಿ ಆಶ್ಚರ್ಯವೇನಿಲ್ಲ. ಇದಲ್ಲದೆ, ಅವರು ತಮ್ಮ ಬರವಣಿಗೆಯನ್ನು ಮರುಪರಿಶೀಲಿಸಲು ತೀವ್ರವಾಗಿ ಹಿಂಜರಿಯುತ್ತಾರೆ. ತಪ್ಪುಗಳನ್ನು ಚೆನ್ನಾಗಿ ಗೀರೆಳೆದು, ಚಿತ್ತುಮಾಡಿ ಕಾಣದಂತೆ ಮಾಡುವುದು ಅಥವಾ ತಿದ್ದುಪಡಿ ದ್ರವವನ್ನು ಯಥೇಚ್ಛವಾಗಿ ಬಳಸಿ ತಪ್ಪುಗಳನ್ನು ಮರೆಮಾಚಲು ಪ್ರಯತ್ನಿಸುತ್ತಾರೆ.

ಮಕ್ಕಳು ಮತ್ತು ಯುವಜನರನ್ನು ಬರೆಯಲು ತೊಡಗಿಸುವುದನ್ನು ಕುರಿತು ಅಂಕುರ್ ಪರ್ಯಾಯ ಶಿಕ್ಷಣ ಸಮಾಜದ (ಅಂಕುರ್ ಸೊಸೈಟಿ ಫಾರ್ ಆಲ್ಟರ್ನೇಟಿವ್ಸ್ ಎಜುಕೇಶನ್) ಅನುಭವವು (ಇಲ್ಲಿಂದ ಮುಂದೆ – ಅಂಕುರ್) ಗಮನಾರ್ಹವಾಗಿ ವಿಭಿನ್ನವಾಗಿದೆ.

'ಅಂಕುರ್' ಎಂಬ ಸರ್ಕಾರೇತರ ಸಂಸ್ಥೆಯು ದೆಹಲಿಯಲ್ಲಿ ಕಾರ್ಮಿಕರೇ ವಾಸಿಸುವ ಆರು ಬಡಾವಣೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದು ೬–೧೧

ವರ್ಷ ವಯಸ್ಸಿನವರಿಗೆ 'ಕಲಿಕಾ ಸಮೂಹಗಳು' ('ಲರ್ನಿಂಗ್ ಕಲೆಕ್ಟಿವ್ಸ್'), ೧೦–೧೫ ವರ್ಷ ವಯಸ್ಸಿನವರಿಗೆ ಸಂಘಗಳು ಮತ್ತು ಗ್ರಂಥಾಲಯಗಳು, ೧೫ ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರಿಗೆ ಸೈಬರ್ ಮೊಹಲ್ಲಾಗಳು ಮತ್ತು ಮಹಿಳಾ ಯುವ ಸಮೂಹ ('ಯಂಗ್ ವಿಮೆನ್ ಕಲೆಕ್ಟಿವ್')ಗಳನ್ನು ನಡೆಸುತ್ತದೆ. ಇದರ ಜೊತೆಗೆ, ಈ ಬಡಾವಣೆಗಳ ಸಂಪೂರ್ಣ ಸಮುದಾಯದೊಂದಿಗೆ ಕೂಡ ಅಂಕುರ್ ಕೆಲಸ ಮಾಡುತ್ತದೆ. ವಸತಿ ನಿರ್ಮಾಣ ಮತ್ತು ನಿರ್ಮೂಲಗೊಳಿಸುವಿಕೆಯ ವಿಷಯಗಳನ್ನು ಕುರಿತು, 'ಸಮುದಾಯದ ಧಪ್ತರ್ (ಆರ್ಕೈವ್) ಸಂಗ್ರಹಾಲಯ' ದಂತಹ ಮತ್ತು ಆ ಪ್ರದೇಶದಲ್ಲಿ ನಿಯಮಿತ ಕಾರ್ಯಕ್ರಮಗಳ ಮೂಲಕ ಅಲ್ಲಿನ ಬೌದ್ಧಿಕತೆ ವರ್ಧಿಸುತ್ತಿದೆ. ಇತ್ತೀಚೆಗೆ ಅದು ದೆಹಲಿ ಮಹಾನಗರ ಪಾಲಿಕೆ (ದೆಹಲಿ ಮುನ್ಸಿಪಲ್ ಕಾರ್ಪೊರೇಷನ್–ಎಂಸಿಡಿ)ಯೊಂದಿಗೆ ಸಹಯೋಗದ ಯೋಜನೆಯೊಂದನ್ನು ಆರಂಭಿಸಿದೆ: ತಾನು ಕಾರ್ಯನಿರ್ವಹಿಸುತ್ತಿರುವ ಬಡಾವಣೆಗಳ ಆರು ಶಾಲೆಗಳ ಪ್ರಾಥಮಿಕ ತರಗತಿಗಳಲ್ಲಿ ಹಿಂದಿ ಬೋಧನೆಯನ್ನು ಬೆಳೆಸುವುದು.

ಅಂಕುರ್ ನಡೆಸುವ ಸಮೂಹಗಳು ನಿರಂತರ ಮತ್ತು ಸುಸ್ಥಿರ ಆಚರಣೆಗಳಲ್ಲಿ ತೊಡಗಿಕೊಂಡಿವೆ. ಈ ಗುಂಪುಗಳು ಪ್ರತಿ ವಾರವೂ ಯಾವುದಾದರು ಒಂದು ದಿನ ಒಂದೂವರೆಯಿಂದ ಎರಡು ಗಂಟೆಗಳ ಕಾಲ ಭೇಟಿಯಾಗುತ್ತವೆ, ಅಂಕುರ್ ಉದ್ಯೋಗಿಯೊಬ್ಬರು ಸುಗಮಗಾರರಾಗಿ ಅವರ ನಡುವೆ ವರ್ತಿಸುತ್ತಾರೆ. ಈ ಎಲ್ಲ ಸಮೂಹಗಳಲ್ಲೂ ಪ್ರಮುಖ ಭಾಗವಾಗಿ ಬರವಣಿಗೆ ಸೃಷ್ಟಿಶೀಲ ಆಚರಣೆಯಾಗಿ ಉಳಿದಿದೆ. ಕಲಿಕಾ ಸಮೂಹಗಳು (ಲರ್ನಿಂಗ್ ಕಲೆಕ್ಟಿವ್ಸ್) ಸೃಷ್ಟಿಸಿರುವ ರಚನೆಗಳೂ, ಭಿತ್ತಿಪತ್ರ ಅಥವಾ ಕವಿತೆಯ ರೂಪದಲ್ಲಿ ಪ್ರಸಾರವಾಗುತ್ತವೆ. ಉದಾಹರಣೆಗೆ, 'ಸಾವ್ದಾ–ಘೇವ್ರಾದಲ್ಲಿ ನಿಮಗೆ ಏನು ಬೇಕು?' ಎಂಬ ಒಂದು ಪ್ರಶ್ನೆಗೆ ಪ್ರತಿಕ್ರಿಯೆಯಾಗಿ (ಸಾವ್ದಾ–ಘೇವ್ರಾ ಒಂದು ಪುನರ್ವಸತಿ ಬಡಾವಣೆ, ಇದನ್ನು ದೆಹಲಿಯ ವಾಯವ್ಯ ಹೊರವಲಯದಲ್ಲಿ ೨೦೦೬ ರಲ್ಲಿ ಸ್ಥಾಪಿಸಲಾಯಿತು). ಕವಿತೆಯ ರೂಪದಲ್ಲಿ ಸಂಯೋಜಿಸಲ್ಪಟ್ಟವು, ವಾಸ್ತವದಲ್ಲಿ ಮಕ್ಕಳು ಬರೆದ ಪಠ್ಯವು ಲಯಬದ್ಧವಾದ ಮಂತ್ರದಂತಿದೆ.

"ಪಾರ್ಕ್ ಮೇ ಘಾಸ್ ಓರ್ ಪೇಡ್ ಚಾಹಿಯೇ /
ಶಾಪಿಂಗ್ ಮಾಲ್, ಚಿಡಿಯಾ ಘರ್ ಔರ್ ದುಕಾನ್ ಚಾಹಿಯೇ /
ಪಾಪಾ ಕೇ ಲಿಯೇ ಪಾಸ್ ಮೇ ಕಾಮ್ ಚಾಹಿಯೇ /
ನಾಲಿಯೋಂ ಮೇ ಪಾನಿ ಕಾ ಬಹವ್ ಚಾಹಿಯೇ"

(ನಮಗೆ ಉದ್ಯಾನವನದಲ್ಲಿ ಹುಲ್ಲು ಮತ್ತು ಮರಗಳು ಬೇಕು /
ನಮಗೆ ಶಾಪಿಂಗ್ ಮಾಲ್, ಮೃಗಾಲಯ ಮತ್ತು ಅಂಗಡಿಗಳು ಬೇಕು /
ನಮ್ಮ ತಂದೆಗೆ ಹತ್ತಿರದಲ್ಲಿ ಕೆಲಸ ಬೇಕು /
ನಮಗೆ ನೀರು ಹರಿಯುವ ನಲ್ಲಿಗಳು ಬೇಕು).

ಅವರ ವೈಯಕ್ತಿಕ ಕೊಡುಗೆಯನ್ನು ಮುದ್ರಣ ರೂಪದಲ್ಲಿ ತರಲು ಸಾಧ್ಯವಾಗುವುದರಿಂದ, 'ಎ–೪' ಗಾತ್ರದ ಲೇಸರ್ ಮುದ್ರಣದ ಹೊರತಾಗಿಯೂ, ಮಕ್ಕಳಿಗೆ ಅಪಾರ ಮಟ್ಟದ ಆತ್ಮವಿಶ್ವಾಸವನ್ನು ಮತ್ತು ಅವರ ಹೆಚ್ಚಿನ ಕೃತಿಗಳನ್ನು ಮುದ್ರಣದಲ್ಲಿ ನೋಡುವ ಉತ್ಸಾಹವನ್ನು ನೀಡುತ್ತದೆ.

ಉಳಿದ ಸಮೂಹಗಳು ವೈಯಕ್ತಿಕ ಬರಹಗಳಲ್ಲಿ ಹೆಚ್ಚಿನದನ್ನು ಮಾಡುತ್ತವೆ ಯಾದರೂ ಅವು ಸಾಮೂಹಿಕ ಅಭ್ಯಾಸಗಳಿಂದ ಸುಸ್ಥಿರತೆಯನ್ನು ಪಡೆಯುತ್ತವೆ. ಗ್ರಂಥಾಲಯ ಮತ್ತು ಸಂಘಗಳು, ಬರವಣಿಗೆಯನ್ನು ಉತ್ಕೃಷ್ಟಗೊಳಿಸಲು ಸಹಾಯ ಮಾಡುವ ವಿಭಿನ್ನ ಸಂಪನ್ಮೂಲಗಳನ್ನು ಒದಗಿಸುವ ಪ್ರಯತ್ನಗಳಾಗಿವೆ. ಸಂಘವು ಸ್ಥಳೀಯತೆಯ ಮೇಲೆ ಮತ್ತು ಗ್ರಂಥಾಲಯವು ಪುಸ್ತಕಗಳ ಮೇಲೆ ಮತ್ತು ಯಾರೂ ಹೊರಗುಳಿಯದಂತೆ ಗಮನವನ್ನು ನೀಡುತ್ತವೆ. ಈ ಪ್ರಯೋಗದಿಂದ ಕಲಿಯುವುದೇನೆಂದರೆ ಎರಡೂ ಸಂಪನ್ಮೂಲಗಳು ಸಮಾನವೆಂದು ಪರಿಗಣಿಸಲ್ಪಡುತ್ತವೆ. ಈ ಕಾರ್ಯಕ್ರಮಗಳನ್ನು ವಿಲೀನಗೊಳಿಸಲು ಅಂಕುರ್ ಯೋಜಿಸುತ್ತಿದೆ ಮತ್ತು ಯಾವುದೇ ಒಂದು ಸಂಪನ್ಮೂಲ ಇನ್ನೊಂದಕ್ಕಿಂತ ಹೆಚ್ಚು ಎಂದು ಆದ್ಯತೆ ನೀಡುವುದಿಲ್ಲ. ಇದರ ಕಾರ್ಯಕರ್ತರು ತಮ್ಮ ಬಡಾವಣೆಗಳಲ್ಲಿ ಮತ್ತು ಇತರೆಡೆಗಳಲ್ಲಿ ಅನೇಕ ಕಥೆ ಹೇಳುವ ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ಮಕ್ಕಳ ಬರಹಗಳನ್ನು ಈಗ ಬ್ಲಾಗ್‌ಗಳಲ್ಲಿ ಅಪ್‌ಲೋಡ್ ಮಾಡಲಾಗುತ್ತಿದೆ.

(http://khichripurtalkies.blogspot.com/

http://dakshinpuridiaries.blogspot.com/).

ಸೈಬರ್ ಮೊಹಲ್ಲಾದವರು ಬರಹಗಳ ಸಂಕಲನವನ್ನು ತಂದಿದ್ದಾರೆ, ಇದನ್ನು ಹಿಂದಿ ಭಾಷೆಯಲ್ಲಿ ರಾಜ್‌ಕಮಲ್ ಪ್ರಕಾಶನದವರು 'ಬೇಹ್ರೂಪಿಯಾ ಶೇಹರ್' (ಬಹುರೂಪಿ ನಗರ) ಎಂಬ ಪುಸ್ತಕವಾಗಿ ಪ್ರಕಟಿಸಿದರು. ಅನಂತರ 'ಟ್ರಿಕ್ಸ್ಟರ್ ಸಿಟಿ'ಯು (ದಗಾಕೋರ ನಗರ) ಇಂಗ್ಲಿಷ್ ಅನುವಾದವನ್ನು ಪೆಂಗ್ವಿನ್ ಇಂಡಿಯಾ ಹೊರತಂದಿದೆ. ಇದಕ್ಕೂ ಮೊದಲು ಗಲಿಯೋಂ ಸೇ / ಫ್ರಮ್ ದಿ ಬೈಲೇನ್ಸ್ (ಗಲ್ಲಿಯಿಂದ) ಎಂಬುದು ಸೈಬರ್ ಮೊಹಲ್ಲಾ ಅವರಿಂದ ಸ್ವಯಂ ಪ್ರಕಟಿತವಾಗಿತ್ತು.

ಮಹಿಳೆಯರಿಗಾಗಿ ಮಾತ್ರ ಇರುವ ಒಂದೇ ಒಂದು ಪ್ರತ್ಯೇಕ ಗುಂಪು, ಯುವತಿಯರ ಸಮೂಹ (ಯಂಗ್ ವಿಮೆನ್ಸ್ ಕಲೆಕ್ಟಿವ್) ಆಗಿದೆ, ಇದು ಸಾಕಷ್ಟು ಕೌಶಲವರ್ಧನೆ ಕಾರ್ಯಕ್ರಮಗಳನ್ನು ಹೊಂದಿದೆ. ಅವರು ಇತ್ತೀಚೆಗೆ ತಮ್ಮ ಬರಹಗಳ ಆಧಾರದ ಮೇಲೆ 'ಉದ್ಧೇದ್ಬನ್' (ಗೋಜಲು ನೇಯ್ಗೆ – Tangled Weave) ಎಂಬ ಕಿರುಪುಸ್ತಕವನ್ನು ಸ್ವಯಂ ಪ್ರಕಟಿಸಿದ್ದಾರೆ.

ಈ ಪ್ರಯೋಗವು ಮಕ್ಕಳು ಮತ್ತು ಯುವಜನರಲ್ಲಿ ಅಂತರ್ಗತವಾಗಿ ಅಪಾರ ಸೃಜನಶೀಲ ಸಾಮರ್ಥ್ಯವಿದೆ ಮತ್ತು ಈ ಸಂಭಾವ್ಯತೆಗೆ ಅರಳಲು ಅವಕಾಶ ಮಾತ್ರ ಬೇಕಾಗುತ್ತದೆ ಎಂಬುದನ್ನು ತೋರಿಸುತ್ತದೆ. ಅಂಕುರ್‌ನ ಈ ಪ್ರಯೋಗಗಳಿಂದ ಔಪಚಾರಿಕ ಶಾಲೆಗಳು ಸೇರಿದಂತೆ ಇತರ ಬೋಧನೆ–ಕಲಿಕೆಯ ಸನ್ನಿವೇಶಗಳಲ್ಲಿ ಕಲಿಯಬಹುದಾದ ಪಾಠಗಳು ಯಾವುವು 'ಬರೆಯುವ ಹಂಬಲ ಎಲ್ಲಿಂದ ಬರುತ್ತದೆ' ಎಂಬುದನ್ನು ಗುರುತಿಸಲು ಪ್ರಯತ್ನಿಸುವ ಮೂಲಕ ನಾವು ಪ್ರಾರಂಭಿಸೋಣ. ಬರವಣಿಗೆಯ ಬೋಧನಾವಿಧಾನದಲ್ಲಿ ಎಲ್ಲಿಯಾದರೂ ಬರೆಯುವ ಬಯಕೆಯನ್ನು ಹುಟ್ಟುಹಾಕುವ ಅಗತ್ಯವನ್ನು ಅನುಭವಿಸಿರುವೆವಾದರೆ ಇದು ನಾವು ಬರಹಗಾರರಾಗಿ ಅಥವಾ ಕೇಳುಗರಾಗಿ ಬೌದ್ಧಿಕ ಸಂದರ್ಭದಲ್ಲಿ ಸ್ವಾಗತಿಸಲ್ಪಟ್ಟಾಗ ಮಾತ್ರ ಈ ಆಸೆಯನ್ನು ಹೊರಹಾಕಬಹುದು, ಆಗ ಅಲ್ಲಿ ನಾವು ಸ್ವಯಂಪ್ರೇರಿತವಾಗಿ ಬರೆಯುವ ತುಡಿತವನ್ನು ಹತ್ತಿಕ್ಕಿಕೊಳ್ಳದಿರಬಹುದು.

ಅಂಕುರ್ ಸುಗಮಗಾರಿಕೆ ಸಂಘದ ಬರವಣಿಗೆಯ ಕಾರ್ಯಕರ್ತ ಉಲ್ಲೇಖಿಸಿದಂತೆ:

'ನ ಆಜ್ ಮೇಯಿ ಯೇ ಸೋಚ್ ಕೇ ಥಾಮಿ ಕಿ ಮೇರೇ

ಪಾಸ್ ಷಬ್ದ್ ನಹಿ ಹೇ ನಾಹಿ ಇಸ್ ಸವಾಲ್

ನೇ ಬೇಹ್ಕಾಯ ಕಿ ಮೇರಿ ಸಾದಿ–ಸಪತ್ ಬಾಶಾ

ಕಿಸೀ ಕೋ ಪಸಂದ ಆಯೇಗಿ ಕಿ ನಾಹಿ ಬಸ್ ಮನ್

ಮೇ ಜಿನ್ ಖಾಯೋಲೋಂ ಔರ್ ಅಹ್ಸಾಸೋ ಕಿ ಸುನಾಮಿ ಆಯಿ

ಥೀ ಉನ್ಹೇ ಘರ್ ಜೇತ್ ಹೇ, ಪಲಂಗ್ ಪರ್ ಬೈತ್ ಅಪ್ನಿ ಕಾಪಿ ಕೇ ಹವಾಲೇ ಕರ್ ದಿಯಾ.'

(ಇಂದು ನಾನು ಪದಗಳನ್ನು ಹೊಂದಿಲ್ಲ ಎಂಬ ಕಾರಣಕ್ಕೆ ನಿಲ್ಲಲಿಲ್ಲ.

ನನ್ನ ಸರಳ ಮತ್ತು ವಿರಳ ಶೈಲಿಯು ಯಾರನ್ನಾದರೂ ಮೆಚ್ಚಿಸುತ್ತದೆಯೆ ಅಥವಾ

ಇಲ್ಲವೇ ಎಂಬ ಆಲೋಚನೆಯು ನನ್ನ ಹತೋಟಿಯಲ್ಲಿಲ್ಲ.

ಆಲೋಚನೆಗಳು ಮತ್ತು ಭಾವನೆಗಳ ಸುನಾಮಿ ನನ್ನ ಮನಸ್ಸನ್ನು ತಲ್ಲಣಗೊಳಿಸಿತು

ಮತ್ತು ನಾನು ಮನೆಗೆ ಬಂದ ತತ್‌ಕ್ಷಣ,

ನನ್ನ ಚಾಪೆಯ ಮೇಲೆ ಕುಳಿತು ಅವುಗಳನ್ನು ನನ್ನ ದಿನಚರಿಯ ಪುಸ್ತಕಕ್ಕೆ ಶರಣಾಗಿಸಿದೆ.)

ನಮ್ಮ ಅನುಕೂಲಕ್ಕಾಗಿ ಮೇಲೆ ವಿವರಿಸಿದ ದೃಷ್ಟಾಂತವನ್ನು ಸೈದ್ಧಾಂತಿಕಗೊಳಿಸಲು ಬೋಧಾನಾ ತಜ್ಞರೊಬ್ಬರು ಬಂದಿದ್ದಾರೆ, ಅವರೇ ಲೂಯಿಸ್ ರೋಸೆನ್‌ಬ್ಲಾಟ್. ಅವರು ಹೀಗೆ ಬರೆಯುತ್ತಾರೆ:

'ಬರವಣಿಗೆ ಯಾವಾಗಲೂ ಸಮಯದ ಒಂದು ಘಟನೆಯಾಗಿದೆ, ಇದು ಬರಹಗಾರರ ಜೀವನಚರಿತ್ರೆಯಲ್ಲಿ ಒಂದು ನಿರ್ದಿಷ್ಟ ಕ್ಷಣದಲ್ಲಿ, ನಿರ್ದಿಷ್ಟ ಸಂದರ್ಭಗಳಲ್ಲಿ, ಬಾಹ್ಯ ಮತ್ತು ಆಂತರಿಕ ಒತ್ತಡಗಳಿಂದ ಸಂಭವಿಸುತ್ತದೆ. ಆದ್ದರಿಂದ, ಬರವಣಿಗೆಯ ಪ್ರಕ್ರಿಯೆಯನ್ನು ಯಾವಾಗಲೂ ವೈಯಕ್ತಿಕ ಮತ್ತು ಸಾಮಾಜಿಕ ಅಥವಾ ವೈಯಕ್ತಿಕ ಮತ್ತು ಪರಿಸರಿಕಾತ್ಮಕವಾಗಿ ನೋಡಬೇಕು.' (ರೋಸೆನ್‌ಬ್ಲಾಟ್, ೨೦೦೫, ಪು. ೧೭) ಆದ್ದರಿಂದ ಪ್ರತ್ಯೇಕ ಮತ್ತು ವೈಯಕ್ತಿಕ ಲಯಗಳು ಸೇರಲು (sync) ನಾವು ಕಾಯುತ್ತಿರುವಾಗ, ಶಿಕ್ಷಕರು ಸಹಾಯ ಮಾಡಲು ಏನು ಮಾಡಬಹುದು, ರೋಸೆನ್‌ಬ್ಲಾಟ್ ಹೇಳಿದಂತೆ, 'ಖಾಲಿ ಪುಟವನ್ನು ನೋಡುತ್ತಿರುವ ಬರಹಗಾರರು' (ರೋಸೆನ್‌ಬ್ಲಾಟ್, ೨೦೦೫, ಪುಟ ೧೬).

ಅಂಕುರ್ ಹೊಸ ಬರಹಗಾರರನ್ನು ಅವರಿಗೆ ಹತ್ತಿರವಾದ ಸಂಪನ್ಮೂಲಗಳೊಂದಿಗೆ ಸಂಪರ್ಕವಿಟ್ಟುಕೊಳ್ಳುವಂತೆ ನೋಡಿಕೊಳ್ಳುತ್ತದೆ. ಉದಾಹರಣೆಗೆ: ನಾವು ಏನನ್ನು ತಿನ್ನಲು ಇಷ್ಟಪಡುತ್ತೇವೆಯೋ ನಮಗೆ ಯಾವುದು ಸಂತೋಷ, ದುಃಖ, ಕುತೂಹಲ ಮತ್ತು ಕೋಪವನ್ನುಂಟುಮಾಡುತ್ತದೆಯೋ ಅಷ್ಟೇ ಅಲ್ಲ, ನಮ್ಮ ದೃಷ್ಟಿ, ಧ್ವನಿ, ವಾಸನೆ, ಸ್ಪರ್ಶ ಮತ್ತು ಅಭಿರುಚಿಯೊಂದಿಗೆ ಮರುಸಂಪರ್ಕವೂ ಇದೆ. ದಿನಚರಿಗಳನ್ನು ಬರೆಯುವ ಅಭ್ಯಾಸದಿಂದ ಇದನ್ನು ಸಾಧಿಸಲಾಗುತ್ತದೆ, ಆದ್ದರಿಂದ ನಮ್ಮ ಇಂದ್ರಿಯಗಳಿಂದ ನಾವು ಪಡೆಯುವ ಎಲ್ಲ ಒಳಹರಿವುಗಳನ್ನು ನಿರ್ದಿಷ್ಟ ಸ್ಥಳದಲ್ಲಿ, ಲಿಖಿತ ರೂಪದಲ್ಲಿ ಸೆರೆಹಿಡಿಯುತ್ತೇವೆ. ಕೇವಲ ಒಂದು ಇಂದ್ರಿಯದ ಒಳಹರಿವಿನ ಬಗ್ಗೆ ಬರವಣಿಗೆಯನ್ನು ಕೇಂದ್ರೀಕರಿಸಲು ವಿದ್ಯಾರ್ಥಿಗಳಿಗೆ ಸೂಚನೆ ನೀಡುವ ಮೂಲಕ ಈ ಅಭ್ಯಾಸದ ಪ್ರಭಾವವನ್ನು

ವರ್ಧಿಸಬಹುದು ಅಥವಾ ವಿಶೇಷ ನಿರ್ದೇಶನ ನೀಡಬಹುದು. ಇದು ನಿತ್ಯವೂ ರಾಗಗಳನ್ನು ಅಭ್ಯಾಸ ಮಾಡುವ ಸಂಗೀತದ ವಿದ್ಯಾರ್ಥಿಗಳಂತೆ ಅಥವಾ ಸಮರ ಕಲೆಗಳ ವಿದ್ಯಾರ್ಥಿಗಳು ಮೂಲ ಹೊಡೆತಗಳು ಮತ್ತು ರಕ್ಷಣಾತ್ಮಕ ಚಲನೆಗಳನ್ನು ಅಭ್ಯಾಸ ಮಾಡುವಂತೆ ಬರಹಗಾರರಿಗೂ ದಿನಚರಿಯಾಗಬೇಕು.

ಅಂಕುರ್, ವಿದ್ಯಾರ್ಥಿಗಳನ್ನು ವಿವಿಧ ಜನರೊಂದಿಗೆ ಸಂಭಾಷಣೆಯಲ್ಲಿ ತೊಡಗಿಸುವ ಮೂಲಕ ಮತ್ತು ಪುಸ್ತಕಗಳನ್ನು ಓದಿಸುವ ಮೂಲಕ ಉನ್ನತ ಬರವಣಿಗೆಯ ಅಭ್ಯಾಸಗಳಿಗೆ ಮುನ್ನಡೆಸುತ್ತದೆ. ಕೇಳುವ ಮತ್ತು ಓದುವ ಕಾರ್ಯದಲ್ಲಿ ಮೂಲಭೂತ ಹೋಲಿಕೆ ಇದೆ ಎಂದು ಅವರು ನಂಬುತ್ತಾರೆ ಮತ್ತು ಎರಡೂ ಪ್ರಕ್ರಿಯೆಗಳಲ್ಲಿ ಸಕ್ರಿಯರಾಗಿರಲು ಕಾರ್ಯಕರ್ತರನ್ನು ಪ್ರೋತ್ಸಾಹಿಸುತ್ತದೆ. ಜನರೊಂದಿಗಿನ ಸಂಭಾಷಣೆ ಮತ್ತು ಪುಸ್ತಕಗಳನ್ನು 'ಓದುವ ಸಂವಹನಗಳು' ಬರವಣಿಗೆಗೆ ಚೈತನ್ಯ ನೀಡುತ್ತವೆ.

ಆದರೆ ಉತ್ಸಾಹದ ಮೊದಲ ಉದ್ದೀಪನೆ ಮಸುಕಾದ ಅನಂತರ ಏನಾಗುತ್ತದೆ, ಬರಹಗಾರರಿಗೆ ಕೆಲವು ಸಾಲುಗಳು ಅಥವಾ ಅರ್ಧ ಪುಟ ಉಳಿದಿರುವಾಗ ಕಲ್ಪನೆಗಳು ಮತ್ತು ಆಲೋಚನಾ ಸರಣಿ ಬರಿದಾದಾಗ ಕೇಳುಗರ ಸಮುದಾಯವು ಬೆಂಬಲವಾಗಿ ನಿಲ್ಲುತ್ತದೆ. ಉತ್ಸಾಹಭರಿತ ಆಲಿಸುವಿಕೆ, ಕುತೂಹಲ ಮತ್ತು ಮೊದಲ ಕೇಳುಗರ ಪ್ರಶ್ನೆಗಳು ಬರಹಗಾರರನ್ನು ಚೈತನ್ಯಗೊಳಿಸುತ್ತವೆ. ಆರಂಭಿಕ ಹಂತದ ಬರಹಗಾರರಿಗೆ, ವಿಶ್ವಾಸಾರ್ಹವಾದ ನಿಕಟವಾಗಿ ಹೆಣೆದ ಮತ್ತು ಪೋಷಿಸುವ ವಲಯವು ಹೆಚ್ಚು ಸೂಕ್ತವಾಗಿದೆ, ಆದರೆ ಹೆಚ್ಚು ಅನುಭವೀ ಬರಹಗಾರರಿಗೆ ಯಾವುದೇ ಕೇಳುಗರ ವಲಯವು ಆ ಉತ್ಸಾಹವನ್ನು ತುಂಬುತ್ತದೆ.

ಸಂಘದ ಮತ್ತೊಬ್ಬ ಕಾರ್ಯಕರ್ತ ಬರೆಯುತ್ತಾರೆ:

ಹಮಾರೇ ಸಾಮ್ನೇ ವಾಲೇ ರಾಜೇಶ್ ಭಯ್ಯಾ ಕೇ

ಸಗಾಯಿ ವಾಲೇ ದಿನ್, ಉನ್ಕೇ ಹೋನೇ ವಾಲೇ ಸಸುರಾಲ್ ಕೇ

ಲೋಗ್ ಉನ್ಕೇ ಘರ್ ಆಯೇ ಉಯೇ ಥೇ

ಪರ್ ಘರ್ ಮೇ ಉತ್ನಿ ಜಗಾ ನಹೀ ಥಿ ಕಿ ಸಬ್ ಮೇಹೇಮಾನ್ ಉಸ್ ಮೇನ್ ಸಮಾ ಜಾಯೇ.

ಇಸ್ ಲಿಯೇ ಕುಚ್ ಲೋಗ್ ಹಮರೇ ಘರ್ ಕೇ ಸಾಮ್ನೆ, ಪಾರ್ಕ್ ಮೇ ಚಾರ್ಪೈ ಪೇ

ಬೈಟ್, ಬಟಿಯಾ ರಾಹೇ ಥೇ. ವಾಹಿ ಕೋನ್ ಮೇ

ಚಾರ್ಪೈ ಪೇ ಬೈಟ್ ಕೇ ಮೇ ಭೀ ಲಿಖ್ ರಹೀ ಥೀ.
ಮುಜೇ ದೇಖ್, ರಾಕೇಶ್ ಭೈಯ್ಯಾ ಕೇ ಸಸೂರ್ ನೇ
ಪೂಛಾ, "ಯೆ ಕ್ಯಾ ಲಿಖ್ ರಹೀ ಹೋ."
ಮೈನೇ ಅಪ್ನೇ ಘರ್ ಕಿ ಔರ್ ಇಶಾರಾ ಕಾರ್ತೇ ಹುವೇ
ಕಹಾ, "ಮೈ ಅಪ್ನೇ ಘರ್ ಕೇ ಬಾರೇ ಮೇ ಲಿಖ್
ರಹಿ ಹೂ. "

ರಾಜೇಶ್ ಭೈಯ್ಯಾ ಅವರ ನಿಶ್ಚಿತಾರ್ಥದ ದಿನ ಅವರ 'ಭಾವಿ ಮಾವನ' ಕಡೆಯವರು ಅವರ ಮನೆಗೆ ಬಂದಿದ್ದರು. ಆದರೆ ಎಲ್ಲರಿಗೂ ಅವರ ಮನೆಯಲ್ಲಿ ಕೂರಲು ಜಾಗ ಸಾಕಾಗಲಿಲ್ಲ. ಅದಕ್ಕೆ ಕೆಲವು ಅತಿಥಿಗಳು ನಮ್ಮ ಮನೆಯ ಎದುರಿಗಿರುವ ಉದ್ಯಾನದಲ್ಲಿ ಚಾಪೆ ಮೇಲೆ ಕುಳಿತು ಮಾತನಾಡುತ್ತಿದ್ದರು. ನಾನು ಆ ಚಾಪೆಯ ಒಂದು ಮೂಲೆಯಲ್ಲಿ ಕೂತು ಬರೀತಾಯಿದ್ದೆ. ಸ್ವಲ್ಪ ಹೊತ್ತು ನನ್ನನ್ನು ನೋಡಿದ ಅನಂತರ, ರಾಕೇಶ್ ಭೈಯ್ಯಾ ಅವರ ಮಾವ ನನ್ನನ್ನು ಕೇಳಿದರು, "ನೀವು ಏನು ಬರೆಯುತ್ತಿದ್ದೀರಿ?" ನಾನು ನನ್ನ ಮನೆಯ ಕಡೆಗೆ ತೋರಿಸಿ, "ನಾನು ನನ್ನ ಮನೆಯ ಬಗ್ಗೆ ಬರೆಯುತ್ತಿದ್ದೇನೆ" ಎಂದು ಹೇಳಿದೆನು.

ಓರ್ ಫಿರ್ ಮೇ ಅಪ್ನೇ ಲಿಖ್ನೇ ಕೀ ಧುನ್ ಮೇ
ಖೋ ಗಯೀ. ಫಿರ್ ದೂ ಬಾರಾ ಉನ್‌ಕಿ ಆವಾಜ್ ಆಯೀ,
"ಕ್ಯಾ ಸುನ್‌ನಾ ಚಾಹೋಗೀ?"
"ಕ್ಯೋ ನಹಿ."
ಮೈ ಸುನ್‌ನೇ ಲಗೀ. ಜೈಸೇ ಲೇಖ್ ಖತಮ್ ಹುವಾ
ಸಬ್ ಕಿ ಬಾತ್ ಚೀತ್ ದುಬಾರ ಶುರು ಹೋ ಗಯೀ.
ಪರ್ ಅಬ್ ಉಂಕೀ ಜುಬಾನ್ ಪಾರ್ ಮೇರಾ ಲೇಖ್ ಥಾ

(ನಾನು ನನ್ನ ಗಮನವನ್ನು ನನ್ನ ಬರಹದ ಕಡೆಗೆ ತಿರುಗಿಸಿದೆ ಮತ್ತು ನನ್ನ ಬರವಣಿಗೆಯಲ್ಲಿ ಕಳೆದುಹೋದೆ. ಮತ್ತೊಮ್ಮೆ ಅವರ ಧ್ವನಿ ಕೇಳಿತು, "ನೀವು ಅದನ್ನು ನಮಗೆ ಓದುತ್ತೀರಾ?"

"ಏಕಿಲ್ಲ?" ಎಂದು ಹೇಳಿ ಜೋರಾಗಿ ಓದಲು ಪ್ರಾರಂಭಿಸಿದೆ.

ನಾನು ಓದಿ ಮುಗಿಸಿದ ಅನಂತರ, ಮತ್ತೆ ಅವರ ಮಾತುಕತೆ ಮುಂದುವರಿಯಿತು. ಈ ಸಲ ಅವರ ಮಾತುಕತೆ ನನ್ನ ಬರಹದ ಬಗೆಗಿತ್ತು.)

"ಅರೇ ವಾ ಕ್ಯಾ ಲಿಖ್ತಿ ಹೇ."
"ಏಕ್ ದಿನ್ ಯೇ ಲೇಖಿಕಾ ಬನೇಗಿ."
"ಅರೇ ಬಡಾ ದಿಮಾಗ್ ಹೈ."
ಧೀರೇ ಧೀರೇ ಯೇ ಬಾತೇ ಮೇರೇ ಪಾಪಾ ಕೇ
ಕಾನೋ ಮೇ ಭಿ ಅಪ್ನಿ ಗೂಂಜ್ ಚೋಡ್ನೇ ಲಗಿ.
ವೋ ಭಿ ಮೇರಿ ತಾರಾಫ್ ನೈ ನಜರಾನ್ ಸೇ ದೇಖ್ನೇ ಲಗೇ.
("ವಾಹ್, ಅವಳು ಎಷ್ಟು ಚೆನ್ನಾಗಿ ಬರೆಯುತ್ತಾಳೆ."
"ಒಂದು ದಿನ ಅವಳು ಪ್ರಸಿದ್ಧ ಬರಹಗಾರ್ತಿಯಾಗುತ್ತಾಳೆ."
"ಅವಳು ನಿಜವಾಗಿಯೂ ಬಹಳ ಬುದ್ಧಿಶಕ್ತಿ ಹೊಂದಿದ್ದಾಳೆ."
ಈ ಹೊಗಳಿಕೆ ನನ್ನ ತಂದೆಯ ಕಿವಿಯನ್ನು ತಲಪಿತು.
ಅವರೂ ಸಹ ನನ್ನನ್ನು ಹೊಸ ಕಣ್ಣುಗಳಿಂದ ನೋಡಿದರು.)

ಈ ಬರವಣಿಗೆಯ ಚಕ್ರವು, ಬರಹಗಳನ್ನು ಹಂಚಿಕೊಳ್ಳುವುದು ಮತ್ತು ಹೊಸ ಹುರುಪಿನಿಂದ ಬರವಣಿಗೆಯ ಪ್ರಕ್ರಿಯೆಗೆ ಮರಳುವುದಾಗಿದ್ದು, ಇದನ್ನು 'ಅಂಕುರ್' ಉತ್ಪಾದಕ ಸಂವಹನ ಸುರುಳಿ ಎಂದು ಕರೆಯಲಾಗಿದೆ. ಇದು ಬರಹಗಾರರ ಸಮೂಹದ ಒಳಗೆ ಪ್ರಾರಂಭವಾಗಿ ಸಮುದಾಯದ ಆಚೆಗೂ ತಲಪಿ, ಅಂತಿಮವಾಗಿ ವಿಶಾಲ ಪ್ರಪಂಚವನ್ನು ತಲಪಿ ಒಂದಲ್ಲ ಒಂದು ರೂಪದಲ್ಲಿ ಪರಿಣಾಮ ಬೀರುತ್ತದೆಂದು ಆಶಿಸಲಾಗಿದೆ.

ಅತ್ಯಂತ ಮುಖ್ಯವಾದ ವಿಷಯವೆಂದರೆ ಕಲಿಕೆಯ ಚಟುವಟಿಕೆಯಾದ ಬರವಣಿಗೆಯಿಂದ ಆಚೆಗೆ ಬರವಣಿಗೆಯೇ ಒಂದು ಪ್ರತ್ಯೇಕ ಘಟಕವಾಗುವಂತೆ ಚಲಿಸಬೇಕಾಗಿದೆ. ಬರವಣಿಗೆಯನ್ನು ಕೈಗೊಂಡವರು ಅದನ್ನು ಅಂತಿಮಗೊಳಿಸಲು ಮತ್ತೆಮತ್ತೆ ತಮ್ಮ ಬರಹಗಳಿಗೆ ಮರಳಿ ಪ್ರತಿಬರಹವನ್ನು ತಿದ್ದಿತೀಡಿ, ಓದಿ ಅಳಿಸಿ ಪುನಃರಚಿಸುವ ಅವಕಾಶ ನೀಡುವ ಆವಶ್ಯಕತೆಯಿದೆ, ಇದೇ ರೀತಿ ಶಾಲಾ ವಿದ್ಯಾರ್ಥಿಗಳ ಬರವಣಿಗೆಯು ಅವರ ಪೋರ್ಟ್‌ಫೋಲಿಯೊದಿಂದ ಪ್ರಾರಂಭವಾಗಬಹುದು.

ಅಂಕುರ್‌ನ ಕಾರ್ಯಕ್ರಮದಲ್ಲಿ, ಬರಹಗಾರರು ತಮ್ಮ ಗೆಳೆಯರ ಗುಂಪುಗಳಲ್ಲಿ ರಚಿಸುವ ಅಥವಾ ತಮ್ಮ ಸಮಾನ ವಯಸ್ಕರೊಡನೆ ಹಂಚಿಕೊಳ್ಳುವ ಮಂಡಲಗಳಲ್ಲಿ ಬರೆಯುವುದಾಗಿದೆ. ಈ ಲೇಖನದ ಅಂತಿಮ ಅಂಶವೆಂದರೆ ಶಿಕ್ಷಕರು ತಮ್ಮ ತರಗತಿಯೊಳಗೆ ಬರವಣಿಗೆಯಲ್ಲಿ ಆಸಕ್ತಿಯುಳ್ಳವರ ಗುಂಪುಗಳನ್ನು ರಚಿಸಿ

ಬರವಣಿಗೆಗೆ ಬೇಕಾದ ವಾತಾವರಣ ಸೃಷ್ಟಿಸಬೇಕಾಗಿದೆ. ಅದಲ್ಲದೆ ಅವರು ಒಬ್ಬರಾದ ಮೇಲೆ ಒಬ್ಬರಂತೆ ಸಂಪಾದಕರ ಪಾತ್ರವನ್ನು ವಹಿಸಿ ಬರಹಗಾರರಿಗೆ ಗೌರವ ನೀಡುವಂತೆಯೇ ಅವರ ಪಠ್ಯವನ್ನು ತಿದ್ದಿ ತೀಡಿ ನಿಖರಗೊಳಿಸಬೇಕಾಗಿದೆ.

* * *

ಪರಾಮರ್ಶನೆ:

1. Rosenblatt, L (2005). Making meaning with texts. Portsmouth, NH: Hienemann

ಚಿಂತನಾತ್ಮಕ ಪ್ರಶ್ನೆಗಳು:

೧. ಬರವಣಿಗೆಯಲ್ಲಿ ನಿರಾಸಕ್ತಿ ಬರಲು ಕಲಿಕಾ ಪರಿಸರ ಮತ್ತು ಬೋಧನಾ ವಿಧಾನವೇ ಕಾರಣವೇ?

೨. "ಭಾಷೆಯೇ ಎಲ್ಲ ವಿಷಯಗಳನ್ನು ಕಲಿಯಲು ತಳಹದಿ. ಅದನ್ನು ಓದಿ ಬರೆದು ಸರಿಯಾಗಿ ಕಲಿಯಬೇಕಾದ ಅಗತ್ಯವಿದೆ"– ಈ ಹೇಳಿಕೆಯ ಬಗ್ಗೆ ನಿಮ್ಮ ಅನಿಸಿಕೆಗಳೇನು?

೩. ನಮ್ಮ ಇಂದಿನ ಶಾಲಾ ವ್ಯವಸ್ಥೆಯು ಮಕ್ಕಳ ಸ್ವಂತಿಕೆ, ಸ್ವೋಪಜ್ಞತೆಗೆ ಆದ್ಯತೆ ನೀಡುತ್ತಿದೆಯೇ? ಇಲ್ಲವೇ? ಚರ್ಚಿಸಿ.

ಸ್ನೇಹಲತಾ ಗುಪ್ತಾ: ಇಂಗ್ಲಿಷ್ ಉಪನ್ಯಾಸಕರು, ದೆಹಲಿಯ ಎನ್‌ಸಿಟಿ, ಸರ್ಕಾರದ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿರುವ ರಾಜಕೀಯ ಪ್ರತಿಭಾ ವಿಕಾಸ್ ವಿದ್ಯಾಲಯ, ಸೂರಜ್ಮಲ್ ವಿಹಾರ್‌ನಲ್ಲಿ ಕೆಲಸಮಾಡುತ್ತಾರೆ. ಅವರ ಆಸಕ್ತಿಗಳೆಂದರೆ ಶಿಕ್ಷಕರ ತರಬೇತಿ, ವಿಮರ್ಶಾತ್ಮಕ ಸಾಕ್ಷರತೆ ಮತ್ತು ಓದುವುದನ್ನು ಕಲಿಸುವ ಬೋಧನೆಯಲ್ಲಿ ಸಂಶೋಧನೆ. snehlatag@gmail.com

ಜೋಸೆಫ್ ಮಥಾಯ್: ಅವರು ೩೦ ಕ್ಕೂ ಹೆಚ್ಚು ವರ್ಷಗಳಿಂದ ಸಾಮಾಜಿಕ ಮತ್ತು ರಾಜಕೀಯ ವಿಷಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರು ಪರಿಸರ, ನಾಗರಿಕ ಹಕ್ಕುಗಳು, ರಂಗಭೂಮಿ ಮತ್ತು ರಾಜಕೀಯ ಕಾರ್ಯಕರ್ತರಾಗಿದ್ದಾರೆ. ೨೦ ವರ್ಷಗಳಿಗಿಂತ ಹೆಚ್ಚು ಕಾಲ ಪುಸ್ತಕ ಪ್ರಕಟಣೆ ವೃತ್ತಿಯಲ್ಲಿ ತೊಡಗಿಕೊಂಡಿದ್ದಾರೆ. ಇವರು ಅಂಕುರ್ ಪರ್ಯಾಯ ಶಿಕ್ಷಣ

ಸಮಾಜದ (ಅಂಕುರ್ ಸೊಸೈಟಿ ಫಾರ್ ಆಲ್ಟರ್ನೇಟಿವ್ಸ್ ಇನ್ ಎಜುಕೇಶನ್) ಸಲಹಾಗಾರರಾಗಿದ್ದಾರೆ. jomathai@gmail.com

ಪ್ರಭಾತ್ ಕುಮಾರ್ ಝಾ: ೧೯೯೩ ರಿಂದ ಅಂಕುರ್ ಪರ್ಯಾಯ ಶಿಕ್ಷಣ ಸಮಾಜದ (ಅಂಕುರ್ ಸೊಸೈಟಿ ಫಾರ್ ಆಲ್ಟರ್ನೇಟಿವ್ಸ್ ಇನ್ ಎಜುಕೇಶನ್) ಜೊತೆ ಕೆಲಸ ಮಾಡುತ್ತಿದ್ದಾರೆ ಮತ್ತು ಪ್ರಸ್ತುತ ಕಾರ್ಯಕ್ರಮ ಸಂಯೋಜಕರಾಗಿದ್ದಾರೆ. ಇವರು ಎನ್‌ಸಿಇಆರ್‌ಟಿ, ಓಕ್ಸ್‌ಫಾಮ್ ಮತ್ತು 'ಲುಸೆಂಟ್ ಎಂಪ್ಲಾಯಬಲಿಟಿ ದತ್ತಿ' ಗಳಿಗೆ ಸಲಹೆಗಾರರಾಗಿದ್ದಾರೆ. altcyber@gmail.com

ಅನುವಾದ: ಆನಂದ ಡಿ / **ಪರಿಶೀಲನೆ:** ರಾಜಗೋಪಾಲ್

ಮೂಲ: Language and Language Teaching Volume 1 Number 1 January 2012.

❑